# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ ನಂ.1005-2018** **ಡಿ. ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಾಲಯ್ಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 19-09-2024.** |

**ಮುಂದುವರೆದ ಪಾಟೀ ಸವಾಲು: ಪಿರ್ಯಾದಿ ಪರ ಶ್ರೀ ಎ.ಪಿ.ಎಂ.ಬಿ ವಕೀಲರಿಂದ:**

ಸಿ.ಸಿ.796/2018 ಮತ್ತು 797/2018 ರ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೇಲ್ಮನವಿ ಸಲ್ಲಿಸಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಸಿ.ಸಿ.796/2018 ಮತ್ತು 797/2018 ರ ಪ್ರಕರಣದ ಪಾಟೀ ಸವಾಲಿನ ಸಮಯ ನಾನು ಚೆಕ್ಕನ್ನು ಸುಬ್ರಮಣ್ಯ ರವರಿಗೆ ನೀಡಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ.

2. ಈಗ ನಾನು ಮಧುವಿನಹಳ್ಳಿ ಗ್ರಾಮದಲ್ಲಿ ವಾಸವಿರುತ್ತೇನೆ ಎಂದರೆ ಸರಿ. ನಾನು ಮಧುವಿನಹಳ್ಳಿಗೆ ಹೋಗುವ ಪೂರ್ವದಲ್ಲಿ ನಂಜನಗೂಡಿನ ಎನ್.ಜಿ.ಒ ಕಾಲೋನಿಯಲ್ಲಿ ವಾಸವಾಗಿದ್ದೆನು ಎಂದರೆ ಸರಿ. ನಾನು ಚೆಕ್ಕನ್ನು ನೀಡುವ

ಸಮಯ ನಂಜನಗೂಡಿನ ಎನ್.ಜಿ.ಒ ಕಾಲೋನಿಯಲ್ಲಿ ವಾಸವಿದ್ದು, ಈ ಪ್ರಕರಣವನ್ನು ದಾಖಲಿಸುವ ವೇಳೆಗೆ ನನ್ನ ಪತ್ನಿಯ ತವರು ಮನೆಯಾದ ಮಧುವಿನಹಳ್ಳಿಗೆ ಹೋಗಿ ವಾಸವಿರುತ್ತೇನೆ ಎಂದರೆ ಸರಿ. ಪಿರ್ಯಾದಿದಾರರು ಎನ್.ಜಿ.ಒ ಕಾಲೋನಿಯ ವಿಳಾಸ ಮತ್ತು ಮಧುವಿನಹಳ್ಳಿಯ ಎರಡೂ ವಿಳಾಸಕ್ಕೂ ನೋಟಿಸ್ ನೀಡಿದ್ದರು ಎಂದರೆ ಸಾಕ್ಷಿ ಎನ್.ಜಿ.ಒ ಕಾಲೋನಿ ವಿಳಾಸಕ್ಕೆ ನೋಟಿಸ್ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಆದರೆ ಮಧುವಿನಹಳ್ಳಿ ವಿಳಾಸಕ್ಕೆ ನೀಡಿದ್ದ ನೋಟಿಸ್ ನನಗೆ ತಲುಪಿರುತ್ತದೆ ಎಂದು ನುಡಿಯುತ್ತಾರೆ.

3. ಕ್ರಯ ಮಾಡಿ ಬಂದ ಹಣವನ್ನು ನಾನು ಬ್ಯಾಂಕಿನಲ್ಲಿ ಇಟ್ಟಿರುವುದಿಲ್ಲ. ನಾನು ಪಿರ್ಯಾದಿರರಿಗೆ ಹಣವನ್ನು ವಾಪಸ್ಸು ಮಾಡಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸಂಬಳಕ್ಕಾಗಿ ಖಾತೆಯನ್ನು ತೆರೆದಿದ್ದು, ಕೆಲಸ ಹೋದ ನಂತರ ನಾನು ಖಾತೆಯನ್ನು ಮುಂದುವರೆಸಿರುವುದಿಲ್ಲ ಎಂದು ನಡಿಯುತ್ತಾರೆ. ನನ್ನ ಬಳಿ ಹಣ ಇತ್ತು ತೋರಿಸಲು ನಿಡಿ–8 ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಬಳಿ ಸ್ವತ್ತನ್ನು ಮಾರಾಟ ಮಾಡಿ ಬಂದ ಹಣ ಖಾತೆಯಲ್ಲಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಬ್ಯಾಂಕಿಗೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಎಸ್.ಬಿ.ಎಂ ಬ್ಯಾಂಕಿನ ಪಾಸ್ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳುವಂತೆ ಎಸ್.ಬಿ.ಎಂ ಬ್ಯಾಂಕಿನ ಯಾವುದೇ ಪಾಸ್ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರ ಬಳಿ ಹಣ ಪಡೆಯುವ ಸಮಯ ನನ್ನ ಬಳಿ ಯಾವುದೇ ಹಣ ಇರಲಿಲ್ಲ, ಪಿರ್ಯಾದಿದಾರರಿಗೆ ಹಣವನ್ನು ಮರುಪಾವತಿ ಮಾಡುವ ಭಾದ್ಯತೆಯಿಂದ ತಪ್ಪಿಸಿಕೊಳ್ಳುದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಿ.ಸಿ.796/2018 ಮತ್ತು 797/2018 ರ ಎಸ್.ಬಿ.ಎಂ ಬ್ಯಾಂಕಿನ ಪಾಸ್ ಪುಸ್ತಕವನ್ನು ಹಾಜರುಪಡಿಸಿದ್ದು, ಆದರೆ ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ, ನಾನು ಈ ಪ್ರಕರಣದಲ್ಲಿ ಪಾಸ್ ಪುಸಕ್ತವನ್ನು ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿದಾರರಿಗೆ ಮನೆ ಮಾರಾಟ ಮಾಡಿರುವ ವಿಚಾರವನ್ನು ಮುಚ್ಚಿಟ್ಟು, ನನ್ನ ದುರಾಭ್ಯಾಸಗಳಿಗೋಸ್ಕರ ಪಿರ್ಯಾದಾರರಿಂದ ಸಾಲ ಪಡೆದು ಈಗ ಸಾಲ ಪಡೆದಿಲ್ಲ ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಯನ್ನು ಮಾರಾಟ ಮಾಡಿದ ನಂತರ ನಾನು ಪಿರ್ಯಾದಿದಾರರಿಂದ ಸಾಲವಾಗಿ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪಿರ್ಯಾದಿದಾರರ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**